# ಜ್ವಾಲಾಮುಖಿ ಮತ್ತು ಸುನಾಮಿಯ ಅಲೆ



■ ಟಿ. ಎಸ್. ಶ್ರವಣ ಕುಮಾರಿ

ಅವಳ ಕಣ್ಣುಗಳು ಕೋಪದಿಂದ ಕೆಂಡಗಳನ್ನುಗುಳುತ್ತಿದ್ದವು. ಮೈಯೆಲ್ಲಾ ಥರಥರಗುಟ್ಟುತ್ತಿತ್ತು. ಮಾತು ಹೊರಬಂದರೆಲ್ಲಿ ಜ್ವಾಲಾಮುಖಿಯೇ ಸ್ಫೋಟಗೊಳ್ಳುವುದೋ ಎಂಬಂತೆ ಮೌನವಾಗಿಯೇ ಅವಳು ಸಿಟ್ಟು ಸೆಡವುಗಳ, ದುಃಖ ತಿರಸ್ಕಾರದ ಕಣೆಗಳನ್ನು ಅವನೆಡೆಗೆ ತೂರುತ್ತಲೇ ಇದ್ದಳು. ಈ ಕಲಹ ಭಾನುವಾರ ಬೆಳಗ್ಗೆಯೇ ಏಕೆ ಆರಂಭವಾಗಬೇಕಿತ್ತು?! ಇಬ್ಬರಿಗೂ ಇಂದು ಒಟ್ಟಾಗಿ ಮಾಡುವ ಹಲವು ಕೆಲಸಗಳಿದ್ದವು. ಆದರೆ ಇಬ್ಬರ ನಡುವೆ ಬೆಳಗ್ಗೆಯೇ ಆಗಸವೆಲ್ಲಾ ಮೋಡಗಳಿಂದ ದಟ್ಟೈಸಿ ಇತ್ತ ಮಳೆಯೂ ಬಾರದಂತಹ ಅಂಧಕಾರ, ಮೂಗುಬ್ಬಸ ಕವಿದು ಅವರಿಬ್ಬರೂ ಕುಳಿತಲ್ಲಿನ ನಡುವಿನ ಹತ್ತು ಅಡಿಗಳ ಅಂತರ ಹತ್ತು ಸಾವಿರ ಮೈಲುಗಳ ಅಂತರವೇನೋ ಎನ್ನುವಂತೆ ಅವರ ಮನಸ್ಸುಗಳು ವಿಮುಖವಾಗಿದ್ದವು.

ಆ ವಿಷಯ ಇಂದು ಬೇಡವಿತ್ತು. ಆದರೆ ಬೇಡವೆಂದರೂ ನಡೆದುಹೋಗಿತ್ತು. ಹಾಗೆ ನಡೆದ ವಿಷಯ ಮೊಬೈಲ್‌ನ ಆ ಕರೆಯ ಮೂಲಕ ಅವಳ ಗಮನಕ್ಕೂ ಬಂದುಬಿಟ್ಟಿತ್ತು. ಮೊಬೈಲ್‌ನಲ್ಲಿ ಮಾತನಾಡುತ್ತಿರುವಾಗಲೇ ಅವಳು ನೋಟದಲ್ಲಿ ಉಗುಳುತ್ತಿದ್ದ ಬೆಂಕಿಯ ಕಿಡಿಗಳನ್ನು ಅವನು ಅವಳೆಡೆಗೆ ನೋಡುತ್ತಲೇ ಸ್ವೀಕರಿಸುತ್ತಿರುವವನಂತೆ ನುಂಗುತ್ತಿದ್ದ. ನುಂಗಲೇಬೇಕಿತ್ತು. ಅವಳು ಎಂದಿನಿಂದಲೋ ಆ ವಿಷಯಕ್ಕೆ ತನ್ನ ತೀವ್ರವಾದ ಅಸಮ್ಮತಿಯನ್ನು, ತಿರಸ್ಕೃತಿಯನ್ನು ಖಡಾಖಂಡಿತವಾಗಿ ತೋರಿದ್ದಳು. ಆದರೂ ಅವನಿಗದನ್ನು ಮಾಡಲೇಬೇಕಾದ ಅನಿವಾರ್ಯವಿತ್ತು. ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ; ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳುವಂತಿರಲಿಲ್ಲ. ಅಷ್ಟು ಮುಖ್ಯವಾಗಿತ್ತು. ಮಾಡಿದ ನಂತರ 'ತಿಳಿಸಲೇ', 'ಬೇಡವೇ' ಎನ್ನುವ ಜಿಜ್ಞಾಸೆಯಲ್ಲಿರುವಾಗಲೇ ಅವಳಿಗೆ ಆ ಮುಂಜಾನೆ ತಿಳಿದುಹೋಗಿತ್ತು.

ತನ್ನ ನಿರ್ಧಾರಗಳಿಗೆ, ಅನಿಸಿಕೆಗಳಿಗೆ ಇಷ್ಟೇನೇ ಬೆಲೆ? ಗಂಡ ಹೆಂಡಿರ ನಡುವೆಯೂ ಇಂತಹ ಅಪ್ರಾಮಾಣಿಕತೆ ತಲೆದೋರಿದರೆ, ನಮ್ಮ ನಡುವಿನ ಸಂಬಂಧಕ್ಕೆ ಏನಾದರೂ ಅರ್ಥವಿದೆಯೇ? ಅವಳು ಹತಾಶಳಾಗಿದ್ದಳು. ಸೀದಾ ಕೋಣೆಗೆ ಹೋಗಿ, ಮೊಬೈಲ್ ಸ್ವಿಚಾಫ್ ಮಾಡಿ ಕಿಟಕಿಯ ಪರದೆಯನ್ನು ಸರಿಸಿ, ಎಷ್ಟೋ ವರ್ಷಗಳಿಂದ ಮುಚ್ಚಿದ್ದ ಅದರ ಬಾಗಿಲನ್ನಿಷ್ಟು ತೆರೆದು ತಾನು ಸಾಗಿಬಂದ ಹಾದಿಯತ್ತ ನೋಡುತ್ತಿದ್ದೇನೇನೋ ಎಂಬಂತೆ ಕಣ್ಣು ಕಾಣುವವರೆಗೂ ದೃಷ್ಟಿ ಹರಿಸುತ್ತಾ ನಿಂತಳು. ಪರಿತಾಪದ ಭಾವಗಳನ್ನು ನಿಯಂತ್ರಿಸಲಾಗದೆ ಕಣ್ಣುಮುಚ್ಚಿಕೊಂಡು ವೇದನೆಯನ್ನು ಕಣ್ಣರೆಪ್ಪೆಯೊಳಗೆ ಅದುಮಿಡಲು ಯತ್ನಿಸತೊಡಗಿದಳು.

ಅವಳೆದೆಯಿಂದ ಹೊರಟ ಒಂದೊಂದು ಭಾವವೂ ಯಾವ ಮಾತಿನ ಹಂಗಿಲ್ಲದೆಯೇ ಅವನೆದೆಯನ್ನು ತಾಕತೊಡಗಿದ್ದವು. ತಾನು ಮೌನವನ್ನು ಮುರಿದರೆ ಎದ್ದೇಳಬಹುದಾದ ಅಗ್ನಿಪರ್ವತದ ಸ್ಫೋಟದ ಅರಿವಿದ್ದ ಅವನು ತನ್ನ ಬಾಯನ್ನು ಹೊಲಿದುಕೊಂಡಂತೆ ಬಾಲ್ಕನಿಯಲ್ಲಿ ಕುಳಿತು ಅವಳ ಹೃದಯದಲ್ಲಿ ಎದ್ದೇಳುತ್ತಿದ್ದ ಜ್ವಾಲಾಮುಖಿಯ ಜ್ವಾಲೆಗಳ ತಾಪದಲ್ಲಿ ಸುಡುತ್ತಿದ್ದ. ತುಸು ಹೊತ್ತಿನಲ್ಲೇ ತನ್ನ ಮನದ ಸಂತಾಪವನ್ನೆಲ್ಲಾ ಬಿಂಬಿಸುವಂತೆ ಆಕಾಶದಲ್ಲಿ ದಟ್ಟೈಸತೊಡಗದ ಕಾರ್ಮೋಡಗಳನ್ನು ನೋಡ ತೊಡಗಿದ. ಇನ್ನಷ್ಟು, ಮತ್ತಷ್ಟು ಸೇರುತ್ತಾ ಹಿತವಾದ ಬಿಸಿಲು ಇರಬಹುದಾದ ಕಾಲದಲ್ಲಿ ಮಂಕು ಕತ್ತಲು ಕವಿಯತೊಡಗಿತು. 'ಅವಳಿಗಷ್ಟು ಇರುಸುಮುರುಸಾಗುವ, ಕಂಗೆಡಿಸುವ ಕೆಲಸವನ್ನು ಮಾಡುವ ಮುಂಚೆ ನಾನು ಇನ್ನೊಮ್ಮೆ ಯೋಚಿಸಬೇಕಿತ್ತೆ?' ಎಂದು ಪದೇ ಪದೇ ಅನ್ನಿಸಿದರೂ, ಆಗಿಹೋಗಿದ್ದರ ಬಗ್ಗೆ ಈಗ ಚಿಂತಿಸಿ ಫಲವೇನು! ತಿಳಿದಾಗ ಅವಳನ್ನು ಹೇಗೋ ಸಮಾಧಾನ ಪಡಿಸಬಹುದೆಂದು ಅಂದುಕೊಂಡಿದ್ದು ಇಷ್ಟರಮಟ್ಟಿಗೆ ಎಡವಟ್ಟಾಗುವುದೆಂದು ಅವನಿಗೂ ಅನ್ನಿಸಿರಲಿಲ್ಲ. ಅವಳು ಇಷ್ಟು ತೀವ್ರವಾಗಿ ನೊಂದುಕೊಂಡು ಹೀಗೆ ಪ್ರತಿಭಟಿಸಬಹುದೆಂದೂ ಯೋಚಿಸಿರಲಿಲ್ಲ. ಆಕಾಶದಲ್ಲಿ ಮೋಡಗಳು ಇನ್ನೂ ದಟ್ಟೈಸುತ್ತಲೇ ಇವೆ. ಬಿಸಿಹಬೆಯನ್ನು ಬಿಟ್ಟರೆ ಬೇರೇನೂ ಇಲ್ಲ. ಒಮ್ಮೆ ಮಳೆ ಆರಂಭವಾದರೆ ಹಗುರಾಗಬಹುದೇನೋ ಅನ್ನಿಸಿದರೂ ಅದು ತನ್ನಿಂದಲೇ ಆರಂಭವಾದರೆ ಮುಗಿಯುವ ಸಂಭವವಿಲ್ಲ ಎನ್ನುವುದು ಅರಿವಾದವನಂತೆ ಮೊಬೈಲನ್ನು ನಿಶ್ಶಬ್ದಕ್ಕೆ ದೂಡಿ ಕುರ್ಚಿಗೊರಗಿ ಕಣ್ಣುಮುಚ್ಚಿಕೊಂಡು ಆಲೋಚನೆಗೆ ಬಿದ್ದ.

ಅವಳೂ ವಾತಾವರಣದ ಮೂಕ ಸೆಕೆಯನ್ನು ತಡೆಯಲಾಗದೆ ಕಿಟಕಿಯನ್ನು ತೆರೆದಿಟ್ಟೇ ಬಂದು ಹಾಸಿಗೆಯ ಮೇಲೆ ಬಿದ್ದುಕೊಂಡಳು. ಸಂಬಂಧದ ಪ್ರಾಮಾಣಿಕತೆಯನ್ನು ಪರೀಕ್ಷಿಸಲು ಇಂತಹ ಘಟನೆಗಳೇ ಒರೆಗಲ್ಲಲ್ಲವೇ? ಮಾಡುವ ಮುಂಚೆ ತನಗೊಮ್ಮೆ ಹೇಳಬೇಕೆಂದೂ ಅವನಿಗೆ ಅನ್ನಿಸಲಿಲ್ಲವಲ್ಲ. ತನ್ನ ಬಗ್ಗೆ ಅಷ್ಟೊಂದು